ಬಾರ್ಜ್ ಮೌಂಟೆಡ್ (ಸುಮಾರು 220 ಮೆಗಾ ವ್ಯಾಟ್) ವಿದ್ಯುತ್ ಯೋಜನೆಯನ್ನು ಕಾರ್ಯಗತಗೊಳಿಸುತ್ತಿದ್ದು, ಈ ಯೋಜನೆಯೂ ಸಹಾ ಮುಕ್ತಾಯದ ಹಂತದಲ್ಲಿರುತ್ತದೆ.

ಇ) ಹೊಸ ಸ್ವತಂತ್ರ ವಿದ್ಯುತ್ ಉತ್ಪಾದನಾ ಯೋಜನೆಗಳಿಂದ (Independent Power Producers) ಮಾಡಿಕೊಂಡ ವಿದ್ಯುತ್ ಖರೀದಿ ಒಪ್ಪಂದಗಳ ಪ್ರಕಾರ ವಿದ್ಯುತ್ತನ್ನು ಪಡೆಯಲಾಗುತ್ತಿದೆ.

ಈ) ಪೂರ್ವ ವಲಯದಲ್ಲಿ ಎನ್.ಟಿ.ಪಿ.ಸಿ. ಕೇಂದ್ರ ಘಟಕಗಳಿಂದ ಉತ್ಪಾದನೆಗೊಂಡ ವಿದ್ಯುತ್ತಿನ ದಿನವಹಿ ಸರಾಸರಿ 1.5 ರಿಂದ 2 ದಶಲಕ್ಷ ಯೂನಿಟ್ಟುಗಳ ಪ್ರಮಾಣದಲ್ಲಿ ಪಡೆಯಲಾಗುತ್ತಿದೆ.

ಉ) ಇತ್ತೀಚೆಗೆ ಗೇರುಸೊಪ್ಪದ ಜಲ ವಿದ್ಯುತ್ ಯೋಜನೆಯಲ್ಲಿ ಕರ್ನಾಟಕ ವಿದ್ಯುತ್ ನಿಗಮವು 60 ಮೆಗಾ ವ್ಯಾಟ್ ಸಾಮರ್ಥ್ಯದ ಮೊದಲ ವಿದ್ಯುತ್ ಉತ್ಪಾದನಾ ಘಟಕವನ್ನು ಕಾರ್ಯೋನ್ಮುಖಗೊಳಿಸಿ, ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭಿಸಿರುತ್ತದೆ.

3) ವಿದ್ಯುತ್ ಉತ್ಪಾದನೆಯನ್ನು ಖಾಸಗೀ ರಂಗಕ್ಕೆ ಮುಕ್ತಗೊಳಿಸಲಾಗಿದ್ದು ಕರ್ನಾಟಕ ಸರ್ಕಾರವು ರಾಜ್ಯದಲ್ಲಿ ಸುಮಾರು 8,249 ಮೆಗಾ ವ್ಯಾಟ್‌ನಷ್ಟು ವಿದ್ಯುತ್ ಉತ್ಪಾದನೆಗೆ ಎಂ.ಓ.ಯು: ಸರ್ಕಾರಿ ಆದೇಶಗಳು ಮತ್ತು ಬಿಡ್ ಮಾರ್ಗದ ಮೂಲಕ ವಿವಿಧ ಖಾಸಗೀ ಕಂಪನಿಗಳಿಗೆ ಅನುಮೋದನೆ ನೀಡಿದ್ದು, ಇವು ವಿವಿಧ ಹಂತಗಳಲ್ಲಿರುತ್ತವೆ. ಈಗಾಗಲೇ ರಾಯಲ್ ಸೀಮೆ ಅಲ್ಕಲೀಸ್ ಲಿಮಿಟೆಡ್, ಬಳ್ಳಾರಿ ರವರು 28 ಮೆಗಾ ವ್ಯಾಟ್ ಸಾಮರ್ಥ್ಯದ ವಿದ್ಯುತ್ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಿ ವಿದ್ಯುತ್ ಉತ್ಪಾದನೆಯನ್ನು ಮಾಡುತ್ತಿದೆ. ಟಾಟಾ ಪವರ್ ಕಂಪನಿ ಬೆಳಗಾವಿಯಲ್ಲಿ 81 ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್ ಯೋಜನೆಯ ನಿರ್ಮಾಣ ಕಾರ್ಯವನ್ನು ಕೈಗೊಂಡಿದ್ದು ಇದು ಮುಕ್ತಾಯದ ಹಂತವನ್ನು ತಲುಪಿರುತ್ತದೆ. ಶೀಘ್ರದಲ್ಲಿಯೇ ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭಿಸುವ ನಿರೀಕ್ಷೆ ಇರುತ್ತದೆ. ಮಂಗಳೂರಿನಲ್ಲಿ ತಣ್ಣೀರ್ ಬಾವಿ ಪವರ್ ಕಂಪನಿಯು ಸುಮಾರು 220 ಮೆಗಾ ವ್ಯಾಟ್ ಸಾಮರ್ಥ್ಯದ ಬಾರ್ಜ್ ಮೌಂಟೆಡ್ ವಿದ್ಯುತ್ ಯೋಜನೆಯ ನಿರ್ಮಾಣ ಕಾರ್ಯವನ್ನು ಕೈಗೊಂಡಿದ್ದು ಇದೂ ಸಹಾ ಅಂತಿಮ ಘಟ್ಟದಲ್ಲಿರುತ್ತದೆ. ಬಾಕಿ ಉಳಿದ ಖಾಸಗೀ ಕಂಪನಿಗಳು, ಯೋಜನೆಯ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಕರ್ನಾಟಕ ವಿದ್ಯುತ್ ನಿಗಮವು ಕೈಗೊಳ್ಳಲಿರುವ ನೂತನ ಯೋಜನೆಗಳ ವಿವರ ಬಗ್ಗೆ ಸದರಿ ನಿಗಮದಿಂದ ವಿವರಗಳನ್ನು ಪಡೆಯಬೇಕಾಗಿರುತ್ತದೆ.

ಬೆಳಗಾಂವ ಜಿಲ್ಲೆ ಸವದತ್ತಿ ತಾಲ್ಲೂಕಿನ ಮುರಗೋಡದಲ್ಲಿ 33 ಕೆ.ವಿ. ಸ್ಟೇಷನ್ ಪ್ರಾರಂಭಿಸುವುದು:

59 (261) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಬೆಳಗಾಂ ಜಿಲ್ಲೆ ಸವದತ್ತಿ ತಾಲ್ಲೂಕಿನ ಮುರಗೋಡದಲ್ಲಿ 33 ಕೆ.ವಿ. ವಿದ್ಯುತ್ ಸ್ಟೇಷನ್ ಪ್ರಾರಂಭಿಸಲು ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ನೀಡಿದ್ದರೂ ಇದುವರೆಗೂ ಕೆಲಸ ಪ್ರಾರಂಭಿಸದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

2) ನಿರ್ದಿಷ್ಟವಾಗಿ ಎಷ್ಟು ದಿನಗಳಲ್ಲಿ ಕೆಲಸವನ್ನು ಪ್ರಾರಂಭಿಸಲಾಗುವುದು; ಮತ್ತು ಎಷ್ಟು ದಿನಗಳಲ್ಲಿ ಈ ಕೆಲಸವನ್ನು ಪೂರ್ಣಗೊಳಿಸಲಾಗುವುದು?

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು)

1) ಹೌದು ಬಂದಿದೆ.

2) ಈ ಕೆಲಸವನ್ನು ಮಾರ್ಚ್-2001ರ ಅಂತ್ಯದ ವೇಳೆಗೆ ಪ್ರಾರಂಭಿಸಲಾಗುವುದು. ಹಾಗೂ ಆಗಸ್ಟ್-2001ರ ವೇಳೆಗೆ ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ. ನಿಗದಿತ ಗುರಿಯೊಳಗೆ ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು.

ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಚಿಕ್ಕಬೂದನೂರು ನೀರಾವರಿ ಕೆಲಸ ಪ್ರಾರಂಭಿಸುವುದು:

60 (262) ಶ್ರೀ ಮಹಾಂತೇಶ ಎಸ್. ಕೌಜಲಗಿ (ಬೈಲಹೊಂಗಲ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಬೆಳಗಾಂವ ಜಿಲ್ಲೆ ಸೌವದತ್ತಿ ತಾಲ್ಲೂಕಿನ ಚಿಕ್ಕಬೂದನೂರ ಸಣ್ಣ ನೀರಾವರಿ ಕೆಲಸಕ್ಕೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ಎಂದು ನೀಡಲಾಯಿತು; ಹಾಗೂ ಎಷ್ಟು ಮೊತ್ತಕ್ಕೆ ನೀಡಲಾಯಿತು ಇದರಿಂದ ಎಷ್ಟು ಎಕರೆ ಜಮೀನು ನೀರಾವರಿಯಾಗುವುದು;

2) ಇಲ್ಲಿಯವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ;

3) ಗುತ್ತಿಗೆದಾರರ ನಿರ್ಲಕ್ಷ್ಯತನದಿಂದ ಈ ಕೆಲಸವು ಸ್ಥಗಿತಗೊಂಡಿದ್ದು ಸರ್ಕಾರಕ್ಕೆ ಭಾರಿ ನಷ್ಟ ಆದ ಸಂಗತಿ ನಿಜವೇ;

4) ಹಾಗಿದ್ದಲ್ಲಿ, ಈ ನಷ್ಟಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಉಗ್ರಕ್ರಮ ಕೈಗೊಳ್ಳಲಾಗುವುದೇ;

5) ಹಿಂದಿನ ಮುಖ್ಯಮಂತ್ರಿಗಳು ನೀರಾವರಿ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳಿಗೆ ಸ್ಥಳಕ್ಕೆ ಭೇಟಿಕೊಟ್ಟು ಕೆಲಸ ಪ್ರಾರಂಭಿಸುವಂತೆ ಸೂಚಿಸಿದ ಹಿನ್ನಲೆಯಲ್ಲಿ ಕಾರ್ಯದರ್ಶಿಗಳು ಸ್ಥಳಕ್ಕೆ ಎಂದು ಭೇಟಿ ಕೊಟ್ಟಿರುವರು ಹಾಗೂ ನಿಜವಾಗಿಯೂ ಈ ಕೆಲಸವನ್ನು ಎಂದು ಪ್ರಾರಂಭಿಸುವರು; ಮತ್ತು ಎಷ್ಟು ದಿನಗಳಲ್ಲಿ ಮಾಡಿ ಮುಗಿಸುವರು;

6) ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಹಿಂದಿನ ಮುಖ್ಯಮಂತ್ರಿಗಳು ಇಲಾಖಾ ಕಾರ್ಯದರ್ಶಿಯವರಿಗೆ ಆದೇಶ ನೀಡಿರುವುದು ನಿಜವಲ್ಲವೆ;

7) ಹಾಗಿದ್ದಲ್ಲಿ, ಸದರಿ ಕಾಮಗಾರಿಯನ್ನು ಪ್ರಾರಂಭ ಮಾಡಿ ಎಷ್ಟು ಅವಧಿಯಲ್ಲಿ ಮುಗಿಸಲಾಗುವುದು?